Sri T. CHANNIAH—It is too early to say. Government have not yet taken a decision whether to conduct the district board elections before or after the general election.

ಶ್ರೀ ಮಾಲ ಮರಿಯಪ್ಪ.—ಇಪ್ಪು ಅನಿಶ್ಚಿತವಾಗಿರುವುದರಿಂದ ಸಾರ್ವಜನಿಕ ಪ್ರತಿನಿಧಿಗಳ ಸಹಕಾರ ಮತ್ತು ಸಲಹೆಗಳನ್ನು ಪಡೆಯುವುದಕ್ಕೆ ಸಮಿತಿಗಳನ್ನೇನಾದರೂ ರಚಿಸಲು ಆಲೋಚನೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಚುನಾವಣೆಗಳು ಆಗುವವರೆಗೂ ಕಮಿಟಿಗಳನ್ನು ರಚನೆಮಾಡಬೇಕೆಂದು ಯೋಚನೆಯಾಗಿದೆ ?

ಶ್ರೀ ಮಾಲ ಮರಿಯಪ್ಪ.—ಈ ಕಮಿಟಿಗಳನ್ನು ರಚನೆಮಾಡುವುದಕ್ಕೆ ನುಮಾರು ಎಷ್ಟು ತಿಂಗಳಾಗಬಹುದು ?

ಶ್ರೀ ಟಿ. ಚನ್ನಯ್ಯ.—ಜಾಗ್ರತೆಯಾಗಿ ಮಾಡುತ್ತೇವೆ.

ಶ್ರೀ ಬಿ. ಚಿಕ್ಕಣ್ಣ.—ವಿಶಾಲ ಮೈಸೂರಾದಮೇಲೆ ಜಿಲ್ಲೆಗಳನ್ನು ದೊಡ್ಡದು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅದನ್ನೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ.

Causeway near Boothakatnahalli in Sira-Changavara Road.

Q.—362. Sri B. N. RAME GOWDA (Sira).—

Will the Government be pleased to state :—

(*a*) whether any representation has been made to build a causeway near Boothakatnahalli in Sira-Changavara Road ;

(*b*) the action so far taken to build the causeway ?

A.—Sri T. CHANNIAH (Minister for Public Health and Local Self-Government).—

(*a*) No.

(*b*) Does not arise.

ಶ್ರೀ ಬಿ. ಎಚ್. ರಾಮೇಗೌಡ.—ಈ ಕಾಸ್-ವೇ ಕೆಲಸ ಜಿಲ್ಲಾ ಬೋರ್ಡಿಗೆ ಸೇರಿದ್ದೋ ಅಥವ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸೇರಿದ್ದೋ ?

ಶ್ರೀ ಟಿ. ಚನ್ನಯ್ಯ.—ಜಿಲ್ಲಾ ಬೋರ್ಡಿಗೆ ಸೇರಿದ್ದು.

ಶ್ರೀ ಬಿ. ಎಚ್. ರಾಮೇಗೌಡ.—ಜಿಲ್ಲಾ ಬೋರ್ಡಿನಲ್ಲಿ ಜಾಸ್ತಿ funds ಇಲ್ಲದೆ ಇರುವುದರಿಂದ, ಈ ಕೆಲಸ ಮಾಡಬೇಕಾದರೆ ಬಹಳ ಖರ್ಚಾಗುತ್ತದೆಂದು ಏನಾದರೂ ಸಮಾಚಾರ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಸೇತುವೆಯನ್ನು ಕಟ್ಟುವುದಕ್ಕೆ ಬಹಳ ಹಣ ಖರ್ಚಾಗುತ್ತದೆಂದು ಆ ಕೆಲಸವನ್ನು ತೆಗೆದುಕೊಳ್ಳಲಿಲ್ಲ. ಆದರೆ causeway ಕಟ್ಟತಕ್ಕ ವಿಚಾರದಲ್ಲಿ ಕಡಿಮೆ ಹಣದಲ್ಲಿ ಕಟ್ಟಿಕೊಳ್ಳುವುದಕ್ಕೆ ಸಾಧ್ಯ. ಆ ಕೆಲಸವನ್ನು ಮಾಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

Government witnesses (Payment of batta).

Q.—76. Sri Kotra BASAVANA GOUD (Kudligi).—

Will the Government be pleased to state :—

whether it is a fact that batta is not paid to witnesses in prosecutions launched by the Government ?

A.—Sri A. G. RAMACHANDRA RAO (Minister for Law and Education).—

Attendance of complainants and witnesses at the Criminal Courts being a public duty, payment is made, in accordance with the Rules of Practice, to such of those as are poor or to those who have been put to considerable expense in attending the Court. Batta is not generally paid to all witnesses attending the Criminal Courts.

ಶ್ರೀ ಕೊಟ್ರಬಸವನ ಗೌಡ.—ನನ್ನ ಪ್ರಶ್ನೆಗೆ ಉತ್ತರವಾಗಿ "ಇಲ್ಲವೆಂದು" ಹೇಳಿದ್ದೀರಿ. ಅಕ್ಕ ಪಕ್ಕದ ಪ್ರಾಂತಗಳಲ್ಲಿ ಯಾವ ರೀತಿ ಇದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಕೊಟ್ರ ಬಸವನ ಗೌಡ.—ಅಲ್ಲಿರುವ ವ್ಯವಸ್ಥೆಯೇನು ?

Sri A. G. RAMACHANDRA RAO.—Madras rules are different from Mysore rules. ಅಲ್ಲ ಮ್ಯಾಜಿಸ್ಟ್ರೇಟರ discretionಗೆ ಬಿಟ್ಟಿದ್ದಾರೆ.

ಶ್ರೀ ಕೊಟ್ರಬಸವನ ಗೌಡ.—ಅಲ್ಲಿ ಟಿ. ಎ. ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಅಧ್ಯಕ್ಷರು.—ಅಲ್ಲಯ ರೂಲ್ಸ್ ಬೇರೆ. ಅಲ್ಲಿ ಮ್ಯಾಜಿಸ್ಟ್ರೇಟರುಗಳ ಇಷ್ಟಕ್ಕೆ ಬಿಟ್ಟಿದ್ದಾರೆಂದು ಹೇಳಿದ್ದಾರೆ.

ಶ್ರೀ ಕೊಟ್ರಬಸವನ ಗೌಡ.—ಹಾಗಾದರೆ ಸಾಕ್ಷಿಗಳು ಸ್ವಂತ ಖರ್ಚಿನಿಂದ ಬರಬೇಕಾದರೆ ಬಹಳ ತೊಂದರೆಯಾಗುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮೈಸೂರು ರೂಲ್ಸ್ ಪ್ರಕಾರ ಇದು ಒಂದು public duty. ಅದನ್ನು ಮಾಡಬೇಕು ಎನ್ನುವುದೇ ಉದ್ದೇಶ. ಬಡವರಿಗೆ ಮತ್ತು ಬಹಳ ತೊಂದರೆಯಾಗತಕ್ಕವರಿಗೆ ಈ ರೀತಿ ಟಿ.ಎ. ಕೊಡುವುದಕ್ಕೆ ಮೈಸೂರಿನಲ್ಲಿಯೂ ಅವಕಾಶವಿದೆ.

ಶ್ರೀ ಕೊಟ್ರಬಸವನ ಗೌಡ.—ಸಾಕ್ಷಿ ಹೇಳುವುದಕ್ಕೆ ಬರುವ ಜನರು ಸ್ವಂತ ಖರ್ಚಿನಿಂದ ಬರುವಷ್ಟುಮಟ್ಟಿಗೆ ತಿಳುವಳಿಕೆಯನ್ನು ಹೊಂದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇದುವರೆಗೂ ಮೈಸೂರಿನಲ್ಲಿ ಈ ತರಹ ತೊಂದರೆಯಾಗಿಲ್ಲ.